# ತಾಂತ್ರಿಕ ಶಿಕ್ಷಣ ಇಲಾಖೆ ನಡವಳಿಗಳು

ವಿಷಯ: ಶ್ರೀಮತಿ.ಆರ್.ಎನ್‌ಕೃಷ್ಣವೇಣಿ, ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಎಸ್.ಜೆ. (ಸಂಜೆ)ಪಾಲಿಟೆಕ್ನಿಕ್ , ಬೆಂಗಳೂರು ಇವರ ನಿಲಂಬನೆ ತೆರವುಗೊಳಿಸಿ ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ.

ಓದಲಾಗಿದೆ 1. ಈ ಕಛೇರಿ ಅಮಾನತ್ತಿನ ಆದೇಶ ಸಂ: ಡಿಟಿಇ 13 ಡಿಇಕ್ಯೂ(1) 2013, ದಿನಾಂಕ: 31-10-2013.

2. ಶ್ರೀಮತಿ ಆರ್.ಎನ್.ಕೃಷ್ಣವೇಣಿ ಇವರ ಮನವಿ ಪತ್ರ ದಿನಾಂಕ: 14-04-2014.

* * * *

**ಪ್ರಸ್ತಾವನೆ:**

ಶ್ರೀಮತಿ ಆರ್.ಎನ್.ಕೃಷ್ಣವೇಣಿ, ಆಯ್ಕೆ ಶ್ರೇಣಿ ಉಪನ್ಯಾಸಕರು (ಯಾಂತ್ರಿಕ ವಿಭಾಗ), ಸರ್ಕಾರಿ ಎಸ್.ಜೆ. [ಸಂಜೆ] ಪಾಲಿಟೆಕ್ನಿಕ್, ಬೆಂಗಳೂರು, ಇವರು ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿ 2013 ರ ಏಪ್ರಿಲ್/ಮೇ ಸೆಮಿಸ್ಟರ್ ಪರೀಕ್ಷೆಯ ಥಿಯರಿ ಪಠ್ಯ ವಿಷಯದ ಮರುಮೌಲ್ಯಮಾಪನದ ದೋಷಗಳ ಬಗ್ಗೆ ಮಾನ್ಯ ನಿರ್ದೇಶಕರ ಆದೇಶ ಸಂ.ಡಿಟಿಇ 02 ಇಪಿಎಸ್ 2013 ದಿ:11/10/2013 ರಲ್ಲಿ ಶ್ರೀ.ಆರ್.ಮಂಜುನಾಥ್, ಜಂಟಿ ನಿರ್ದೇಶಕರು (ತನಿಖೆ) ಇವರ ನೇತೃತ್ವದಲ್ಲಿ ಪೂರ್ವಭಾವಿ ವಿಚಾರಣಾ ಸಮಿತಿಯನ್ನು ನೇಮಿಸಲಾಗಿತ್ತು. ಸಮಿತಿಯು ದಿ:31/10/2013 ರಂದು ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಅವಲೋಕಿಸಿದಾಗ ಪ್ರಕರಣಕ್ಕೆ ಸಂಬಂಧಿಸಿದಂತೆ ಮೇ 2013 ಪರೀಕ್ಷೆಯ ಫಲಿತಾಂಶ ಪ್ರಕಟವಾದ ನಂತರ, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯು 32,614 ಉತ್ತರ ಪತ್ರಿಕೆಗಳನ್ನು ಮರುಮೌಲ್ಯಮಾಪನ ಬಯಸಿ ಸಲ್ಲಿಸಿದ ಅರ್ಜಿಗಳನ್ನು ಸ್ವೀಕರಿಸಿದೆ. ಅದರಲ್ಲಿ 132 ವಿದ್ಯಾರ್ಥಿಗಳ 267 ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನದ ಅಂಕಗಳನ್ನು ಉತ್ತರ ಪತ್ರಿಕೆಯ ಜೊತೆ ನಮೂದಿಸಿದ ನಂತರ ಮಾರ್ಕ್‌ಲಿಸ್ಟ್‌ನಲ್ಲಿ ಅಂಕಗಳನ್ನು ನಮೂದಿಸಿ ಮೂವರು ಮರುಮೌಲ್ಯಮಾಪಕರು ಸಹಿ ಮಾಡಿರುತ್ತಾರೆ. ಅದರಲ್ಲಿ 11 ಉತ್ತರ ಪತ್ರಿಕೆಗಳ ಅಂಕಗಳು ಸರಿಯಾಗಿ ಮಾರ್ಕ್ಸ್‌ಲಿಸ್ಟ್‌ನಿಂದ ಕಂಪ್ಯೂಟರ್‌ನಲ್ಲಿರುವ ಮರುಮೌಲ್ಯಮಾಪನ ತಂತ್ರಾಂಶಕ್ಕೆ ವರ್ಗಾಯಿಸಲಾಗಿದೆ. ಉಳಿದ 256 ಉತ್ತರ ಪತ್ರಿಕೆಗಳಿಗೆ ಸಂಬಂಧಿಸಿದಂತೆ 51 ಉತ್ತರ ಪತ್ರಿಕೆಗಳು ಫೋಟೋ ಕಾಪಿ ಮತ್ತು ಮರುಮೌಲ್ಯಪಾಲನಕ್ಕೆ ಸಂಬಂಧ ಪಟ್ಟಿದ್ದಾಗಿರುತ್ತದೆ ಮತ್ತು ಉಳಿದ 205 ಉತ್ತರ ಪತ್ರಿಕೆಗಳು ಮರುಮೌಲ್ಯಮಾಪನಕ್ಕೆ ಮಾತ್ರ ಸಂಬಂಧಿಸಿದ್ದಾಗಿರುತ್ತದೆ. ಮರುಮೌಲ್ಯಮಾಪನಕ್ಕೆ ಸಂಬಂಧಿಸಿದ 256 ಉತ್ತರ ಪತ್ರಿಕೆಗಳ ಮಾರ್ಕ್ಸ್‌ಲಿಸ್ಟ್‌ನಲ್ಲಿ ನಮೂದಿಸಿರುವ ಮರು ಮೌಲ್ಯಮಾಪನದ ಅಂಕಗಳನ್ನು ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿರುವ ಕಂಪ್ಯೂಟರ್ ಸೆಂಟರ್‌ನಲ್ಲಿ ಮರುಮೌಲ್ಯಮಾಪನಕ್ಕೆಂದೇ ತಯಾರಿಸಲಾದ ತಂತ್ರಾಂಶದಲ್ಲಿ ಅಂಕಗಳನ್ನು ಕೀಯಿಂಗ್ ಹಂತಗಳಲ್ಲಿ ನಮೂದಿಸುವಾಗ ದುರಾಚಾರ ನಡೆದಿರುತ್ತದೆಂದು. ಈ ಪ್ರಕರಣಕ್ಕೆ ಶ್ರೀಮತಿ ಆರ್.ಎನ್.ಕೃಷ್ಣವೇಣಿ ಇವರನ್ನು ಹೊಣೆಗಾರರನ್ನಾಗಿ ಮಾಡಬಹುದೆಂದು ಪೂರ್ವಭಾವಿ ಇಲಾಖಾ ತನಿಖೆ ವರದಿಯಲ್ಲಿ ತಿಳಿಸಲಾಗಿರುತ್ತದೆ. ಆದ್ದರಿಂದ ಇವರು ಒಬ್ಬ ಜವಾಬ್ದಾರಿಯುತ ಉಪನ್ಯಾಸಕರಾಗಿದ್ದು, ಇವರಿಗೆ ವಹಿಸಲಾದ ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ಕಂಪ್ಯೂಟರ್ ಸೆಂಟರ್‌ನಲ್ಲಿ 2013ರ ಏಪ್ರಿಲ್/ಮೇ ಸೆಮಿಸ್ಟರ್ ಥಿಯರಿ ಪರೀಕ್ಷೆಗಳ ಮರುಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ 132 ವಿದ್ಯಾರ್ಥಿಗಳ 256 ಉತ್ತರ ಪತ್ರಿಕೆಗಳನ್ನು ಮರುಮೌಲ್ಯಮಾಪನ ಮಾಡಿದ ನಂತರದ ಅಂಕಗಳನ್ನು ಮರುಮೌಲ್ಯಮಾಪನ ತಂತ್ರಾಂಶಕ್ಕೆ ವರ್ಗಾಯಿಸುವಾಗ ಅನುತ್ತೀರ್ಣ ಅಂಕಗಳ ಬದಲಿಗೆ ಉತ್ತೀರ್ಣ ಅಂಕಗಳನ್ನು ನಿಯಮಬಾಹಿರವಾಗಿ ಹಾಗು ಉದ್ದೇಶಪೂರ್ವಕವಾಗಿ ಕೀಯಿಂಗ್ ಮಾಡುವ ಮುಖಾಂತರ ದುರಾಚಾರ ನಡೆದಿದೆ ಎಂದು ಆರೋಪಿಸಲಾಗಿದೆ. ಆದ್ದರಿಂದ ಸದರಿಯವರು ಕರ್ತವ್ಯಲೋಪವೆಸಗಿ ಕರ್ನಾಟಕ ನಾಗರೀಕ ಸೇವಾ [ನಡತೆ] ನಿಯಮಾವಳಿ 1966ರ ನಿಯಮ 3(1)ರ ಉಪ ನಿಯಮ (i) (ii) ಮತ್ತು

. . . . . 2

(iii) ನ್ನು ಉಲ್ಲಂಘಿಸಿದ ಆರೋಪಕ್ಕೆ ಒಳಗಾಗಿರುತ್ತಾರೆ. ಆದ್ದರಿಂದ ಸಂಸ್ಥೆಯ ಆಡಳಿತಾತ್ಮಕ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸದರಿಯವರ ಮೇಲೆ ಸೂಕ್ತ ಶಿಸ್ತು ಕ್ರಮ ಜರುಗಿಸುವ ಕುರಿತು ಇವರನ್ನು ಕೆಸಿಎಸ್ [ಸಿಸಿಎ] ನಿಯಮಾವಳಿ 10 (1)ಡಿ ಯಡಿಯಲ್ಲಿ ದಿನಾಂಕ: 31-10-2013ರಿಂದ ಜಾರಿಗೆ ಬರುವಂತೆ ಅಮಾನತ್ತಿನಲ್ಲಿರಿಸಿ ಆದೇಶಿಸಲಾಗಿತ್ತು. ಸದರಿ ಪ್ರಕರಣದ ಬಗ್ಗೆ ಇಲಾಖಾ ವಿಚಾರಣೆ ಮುಂದುವರೆದಿರುತ್ತದೆ. ಉಲ್ಲೇಖ(2)ರಲ್ಲಿನ ಮನವಿ ಪತ್ರದಲ್ಲಿ ಸದರಿಯವರು ಪ್ರಕರಣಕ್ಕೆ ಸಂಬಂಧಪಟ್ಟ ವಿಚಾರಣೆಗೆ ನಾನು ಸಹಕರಿಸುತ್ತೇನೆ, ಅಲ್ಲದೇ ವಿದ್ಯಾರ್ಥಿಗಳಿಗೆ ಪಾಠ ಪ್ರವಚನ ಮಾಡಲು ಬಹಳ ಉತ್ಸುಕಳಾಗಿರುತ್ತೇನೆ, ದಯವಿಟ್ಟು ನನ್ನ ಅಮಾನತ್ತಿನ ಆದೇಶವನ್ನು ಹಿಂಪಡೆಯಬೇಕೆಂದು ಕೋರಿರುವ ಹಿನ್ನಲೆಯಲ್ಲಿ ಅವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಅಮಾನತ್ತಿನಿಂದ ತೆರವುಗೊಳಿಸಿ ಸರ್ಕಾರಿ ಪಾಲಿಟೆಕ್ನಿಕ್, ಜೋಯಿಡಾ. ಇಲ್ಲಿ ಖಾಲಿ ಇರುವ ಯಾಂತ್ರಿಕ ವಿಭಾಗದ ವಿಭಾಗದ ಆಯ್ಕೆ ಶ್ರೇಣಿ ಉಪನ್ಯಾಸಕರ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಲು ನಿರ್ದೇಶಿಸಲಾಗಿದೆ. ಆದ್ದರಿಂದ ಈ ಆದೇಶ.

**ಆದೇಶ ಸಂ: ಡಿಟಿಇ 13 ಡಿಇಕ್ಯೂ(1) 2013, ದಿನಾಂಕ: 23-06-2014** / 987

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದ ಶ್ರೀಮತಿ.ಆರ್.ಎನ್‌ಕೃಷ್ಣವೇಣಿ, ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಎಸ್.ಜೆ. (ಸಂಜೆ)ಪಾಲಿಟೆಕ್ನಿಕ್, ಬೆಂಗಳೂರು ಇವರನ್ನು ಉಲ್ಲೇಖ(2)ರಲ್ಲಿನ ಸದರಿಯವರ ಮನವಿ ಪತ್ರದಲ್ಲಿ ಕೋರಿರುವಂತೆ ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಅಮಾನತ್ತಿನಿಂದ ತೆರವುಗೊಳಿಸಿ ಸರ್ಕಾರಿ ಪಾಲಿಟೆಕ್ನಿಕ್, ಜೋಯಿಡಾ. ಇಲ್ಲಿ ಖಾಲಿ ಇರುವ ಯಾಂತ್ರಿಕ ವಿಭಾಗದ ಆಯ್ಕೆ ಶ್ರೇಣಿ ಉಪನ್ಯಾಸಕರ ಹುದ್ದೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಸ್ಥಳ ನಿಯುಕ್ತಿಗೊಳಿಸಲಾಗಿದೆ ಸದರಿಯವರು ಕೂಡಲೇ ಕಾರ್ಯವರದಿ ಮಾಡಿಕೊಳ್ಳಲು ಸೂಚಿಸಿದೆ.

**ನಿರ್ದೇಶಕರು**
**ಹಾಗೂ ಶಿಸ್ತು ಪ್ರಾಧಿಕಾರ,**
**ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.**

23/6 23/6

**ಇವರಿಗೆ,**

1. ಶ್ರೀಮತಿ. ಆರ್.ಎನ್. ಕೃಷ್ಣವೇಣಿ
   ನಂ.1104, 4ನೇ ಕ್ರಾಸ್, 5ನೇ ಹಂತ, ಬಿಇಎಮ್‌ಎಲ್ ಲೇಔಟ್,
   ರಾಜರಾಜೇಶ್ವರಿ ನಗರ, ಪೊಲೀಸ್ ಠಾಣೆ ಹಿಂಭಾಗ,
   ಬೆಂಗಳೂರು-560 098
2. ಶ್ರೀಮತಿ.ಆರ್.ಎನ್‌ಕೃಷ್ಣವೇಣಿ, ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಎಸ್.ಜೆ. (ಸಂಜೆ)ಪಾಲಿಟೆಕ್ನಿಕ್ , ಬೆಂಗಳೂರು.(ಪ್ರಿನ್ಸಿಪಾಲರ ಮುಖಾಂತರ)
3. ಪ್ರಿನ್ಸಿಪಾಲರು ಸರ್ಕಾರಿ ಪಾಲಿಟೆಕ್ನಿಕ್ ಜೋಯಿಡಾ.



V ch Suspn

**ಪ್ರತಿ: ಮಾಹಿತಿಗಾಗಿ.**

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ಕೊಠಡಿ ಸಂ: 252, 2ನೇ ಮಹಡಿ, ವಿಧಾನಸೌಧ, ಬೆಂಗಳೂರು.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ [ಉನ್ನತ ಶಿಕ್ಷಣ], ಬಹುಮಹಡಿಗಳ ಕಟ್ಟಡ, ಬೆಂಗಳೂರು-1.
3. ಪತ್ರಿಕಾ ಕಾರ್ಯದರ್ಶಿಗಳು, ಮಾನ್ಯ ಮುಖ್ಯಮಂತ್ರಿಯವರ ಕಾರ್ಯಾಲಯ, ವಿಧಾನಸೌಧ, ಬೆಂಗಳೂರು.
4. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
5. ಖಜಾನಾಧಿಕಾರಿಗಳು, ಜಿಲ್ಲಾ ಖಜಾನೆ, ಬೆಂಗಳೂರು.
6. ಕಾರ್ಯದರ್ಶಿಗಳು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು.
7. ಪ್ರಿನ್ಸಿಪಾಲರು, ಸರ್ಕಾರಿ ಎಸ್.ಜೆ (ಸಂಜೆ) ಪಾಲಿಟೆಕ್ನಿಕ್, ಬೆಂಗಳೂರು.
8. ನಿರ್ದೇಶಕರ ಆಪ್ತಶಾಖೆಗೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
9. ತಾಂತ್ರಿಕ ಶಿಕ್ಷಣ ಇಲಾಖೆಯ ಅಂತರ್‌ಜಾಲ (ಇಂಟರ್‌ನೆಟ್) ಪ್ರಕಟಿಸಲು.
10. ಇಎಸ್‌ಟಿ (2) ಎ , 9, 7, ವಿಭಾಗಗಳಿಗೆ.
11. ಕಛೇರಿ ಪ್ರತಿ.

V ch Suspn